# ಕರ್ನಾಟಕ ಸರ್ಕಾರ

# ಅರಣ್ಯ ಇಲಾಖೆ
# ಸುತ್ತೋಲೆ

ಸಂಖ್ಯೆ: ಬಿ5/ಕೆಟಿಪಿ/ಸಿಆರ್-06/2017-18

ಪ್ರಧಾನ ಮುಖ್ಯಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು) ರವರಕಛೇರಿ,
ಅರಣ್ಯಭವನ, ಮಲ್ಲೇಶ್ವರಂ,
ಬೆಂಗಳೂರು, ದಿನಾಂಕ: 19.06.2017

**ವಿಷಯ:** ಸ್ವಂತ ಉಪಯೋಗಕ್ಕೆ (ಮನೆ ನಿರ್ಮಾಣ ಮಾಡಲು) ನಾಟಗಳನ್ನು ಇಲಾಖಾ ನಾಟಾ ಸಂಗ್ರಹಾಲಯಗಳಿಂದ ಚಿಲ್ಲರೆ ಮಾರಾಟ ದರದಲ್ಲಿ ನೀಡುವ ಕುರಿತು.

**ಉಲ್ಲೇಖ:**
1. ಈ ಕಛೇರಿ ಸುತ್ತೋಲೆ ಸಂಖ್ಯೆ: ಎ8/ಟಿಬಿಆರ್/ಸಿಆರ್-36/87-88 ದಿನಾಂಕ: 02.07.1990
2. ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎ7/ಟಿಬಿಆರ್/ಸಿಆರ್-4/91-92 ದಿನಾಂಕ: 25.03.1992
3. ಸರ್ಕಾರದ ಆದೇಶ ಸಂಖ್ಯೆ ಅಪಜೀ 102 ಅಪಸೇ 99, ದಿನಾಂಕ: 04.09.2003.
4. ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎ5/ಮ.ಮಂ/ಸಿಆರ್-16/2013-14 ದಿನಾಂಕ: 22.07.2013.

* * * * *

ಮೇಲೆ ಓದಲಾದ ಉಲ್ಲೇಖ 01, 02 ಹಾಗೂ 04ರ ಸುತ್ತೋಲೆ ಹಾಗೂ ಅಧಿಕೃತ ಜ್ಞಾಪನಪತ್ರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ಸಾರ್ವಜನಿಕರಿಗೆ ಸ್ವಂತ ಉಪಯೋಗಕ್ಕೆ ಮನೆ ನಿರ್ಮಾಣ ಮಾಡಿಕೊಳ್ಳಲು ಇಲಾಖಾ ನಾಟ ಸಂಗ್ರಹಾಲಯಗಳಿಂದ ನಾಟಗಳನ್ನು ಚಿಲ್ಲರೆ ಮಾರಾಟ ದರದಲ್ಲಿ ಒದಗಿಸುತ್ತಿದ್ದು, ಜಾರಿಯಲ್ಲಿರುವ ಸುತ್ತೋಲೆ ಹಾಗೂ ಅಧಿಕೃತ ಜ್ಞಾಪನಗಳಲ್ಲಿ ವಿಧಿಸಿರುವ ಷರತ್ತುಗಳಂತೆ ನಾಟ ಖರೀದಿಸಲು ತೊಂದರೆಯಾಗುತ್ತಿರುವುದಾಗಿ ಈ ಕಛೇರಿಗೆ ಸಾರ್ವಜನಿಕರು ಮೌಖಿಕವಾಗಿ ತಿಳಿಸಿರುತ್ತಾರೆ. ಆದುದರಿಂದ, ಇಲಾಖಾ ನಾಟ ಸಂಗ್ರಹಾಲಯಗಳಲ್ಲಿ ನಾಟ ಹಾಗೂ ಇತರೆ ಅರಣ್ಯ ಉತ್ಪನಗಳನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಚಿಲ್ಲರೆ ಮಾರಾಟ ದರದಲ್ಲಿ ಈ ಕೆಳಕಂಡ ಜಾತಿಯ ನಾಟಗಳನ್ನು ಸಾರ್ವಜನಿಕರಿಗೆ ಅವರ ಸ್ವಂತ ಉಪಯೋಗಕ್ಕೆ ನೀಡಲು ತೀರ್ಮಾನಿಸಲಾಗಿದೆ.

ರಾಜ್ಯದ ಯಾವುದೇ ಇಲಾಖಾ ನಾಟ ಸಂಗ್ರಹಾಲಯಗಳಿಂದ ಅಕೇಶಿಯಾ ಅರಿಕ್ಯೂಲಿಫಾರ್‌ಮಿಸ್ (Acacia auriculiformis), ಹೊನ್ನೆ (Pterocarpus marsupium), ಯತ್ತೇಗ (Adina

cordifolia), ಕಿರಾಲ್‌ಬೋಗಿ (Hopea parviflora), ನಂದಿ (Lagerstroemia lanceolata), ಮತ್ತಿ (Terminalia tomentosa), ಹೆಬ್ಬಲಸು (Artocarpus hirsuta), ಜಂಬೆ (Xylia xylocarpa), ಕಿಂದಾಳ (Terminalia paniculata), ಹದನಗಾ (Cordia macleodii), ಬರಣಗಿ (Vitex altissima), ಕಲಾಮ್ (Stephegyne parviflora), ನೇರಳೆ (Syzygium cuminii), ಕಲ್‌ಬಾಗೆ (Albizia lebbek), ದಮನ್ (Grewia tiliaefolia), ಮಸ್ಸಿ (Alseodaphne semicarpifolla), ಕರಿಮುತ್ತಾಲ್ (Ougenia dalbergioides), ಬಿಲ್ವಾರ (Albizzia odoratissima), ಕಲ್‌ಗರಿಗೆ (Chukrassia tabularis), ಮತ್ತು ಹಲಸು (Artocarpus integrifolia) ಜಾತಿಯ ನಾಟಗಳನ್ನು ಚಿಲ್ಲರೆ ಮಾರಾಟ ದರದಲ್ಲಿ ಪಡೆಯಬಹುದಾಗಿರುತ್ತವೆ.

**ಷರತ್ತುಗಳು –**

1. ಸ್ವಂತ ವಸತಿ ಮನೆಯನ್ನು ನಿರ್ಮಾಣ ಮಾಡಲು ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದಿರುವ ವಸತಿ ಮನೆಯ ಮಾಲೀಕ/ ಮಾಲೀಕರು ಅವರ ಹೆಸರಿನಲ್ಲಿ ಮಾತ್ರ ಇಲಾಖಾ ನಾಟ ಸಂಗ್ರಹಾಲಯಗಳಿಂದ ಸ್ವಂತ ಉಪಯೋಗಕ್ಕೆ ಜೀವಿತ ಅವಧಿಯಲ್ಲಿ ಒಂದು ಬಾರಿಗೆ ಮಾತ್ರ ನಾಟಗಳನ್ನು ಚಿಲ್ಲರೆ ಮಾರಾಟ ದರದಲ್ಲಿ ಪಡೆಯಲು ಅರ್ಹರಿರುತ್ತಾರೆ.
2. ಇಲಾಖಾ ನಾಟ ಸಂಗ್ರಹಾಲಯಗಳಿಂದ ನಾಟಗಳನ್ನು ಚಿಲ್ಲರೆ ಮಾರಾಟ ದರದಲ್ಲಿ ಸ್ವಂತ ವಸತಿ ಮನೆಗಳನ್ನು ನಿರ್ಮಾಣ ಮಾಡಲು ಇಲಾಖೆ ನಿಗದಿಪಡಿಸಿರುವ ಅರ್ಜಿ ನಮೂನೆಯಲ್ಲಿ ತಿಳಿಸಲಾದಂತಹ ಸ್ವಯಂ ದೃಢಿಕರಿಸಿದ ದಾಖಲಾತಿಗಳೊಂದಿಗೆ ಸಂಬಂಧಿಸಿದ ನಾಟ ಸಂಗ್ರಹಾಲಯದ ಅಧಿಕಾರಿಗೆ ಸಲ್ಲಿಸುವುದು.
3. ಸ್ವಂತ ವಸತಿ ಮನೆಯನ್ನು ನಿರ್ಮಾಣ ಮಾಡಲು ಗರಿಷ್ಟ ಪ್ರಮಾಣದ ನಾಟಗಳನ್ನು ಕೋರಿದಲ್ಲಿ ಒಟ್ಟು ನಿರ್ಮಿಸಲಾಗುತ್ತಿರುವ ವಸತಿ ಪ್ರದೇಶದ ಪ್ರತಿ ಚದರ ಮೀಟರ್‌ಗೆ ಒಂದು ಘನ ಅಡಿ ನಾಟ ಅಥವಾ ಅರ್ಜಿಯಲ್ಲಿ ಕೋರಿರುವ ನಾಟ ಪ್ರಮಾಣ, ಯಾವುದು ಕಡಿಮೆ ಇರುತ್ತದೆಯೊ ಅದನ್ನು ಎಂದು ಪರಿಗಣಿಸುವುದು.
4. ಚಿಲ್ಲರೆ ಮಾರಾಟ ದರದಲ್ಲಿ ಪಡೆಯಬಹುದಾದ ನಾಟಗಳ ಮೊತ್ತವನ್ನು ಇಲಾಖಾ ನಾಟ ಸಂಗ್ರಹಾಲಯಗಳಿಂದ ನಾಟಗಳನ್ನು ಖರೀದಿಸುವ ದಿನಾಂಕದಂದು ಜಾರಿಯಲ್ಲಿರುವ ಚಿಲ್ಲರೆ ಮಾರಾಟ ದರ ಹಾಗೂ ಅನ್ವಯವಾಗುವ ತೆರಿಗೆಯ ಪೂರ್ಣ ಮೊತ್ತವನ್ನು ಪಾವತಿಸುವುದು. ವಸತಿ ಮನೆಯ ಮಾಲೀಕ/ ಮಾಲೀಕರು ಇಲಾಖಾ ನಾಟ ಸಂಗ್ರಹಾಲಯಗಳಿಂದ ನಾಟಗಳನ್ನು ಆಯ್ಕೆ ಮಾಡಿಕೊಳ್ಳಲು

ಬಯಸಿದಲ್ಲಿ, ಚಿಲ್ಲರೆ ಮಾರಾಟ ದರದ ಶೇಕಡಾ 10ರ ಹೆಚ್ಚುವರಿ ಮೊತ್ತವನ್ನು ಪಾವತಿಸಿ ನಾಟ ಸಂಗ್ರಹಾಲಯಗಳಲ್ಲಿ ಇರುವ ದಿಮ್ಮಿಗಳಿಂದ ನಾಟಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

**(ಕೆ. ಎಸ್. ಸುಗಾರ, ಭಾ.ಅ.ಸೇ)**
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿಯನ್ನು**

1. ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಎಲ್ಲಾ ಅಪರ ಪ್ರದಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಎಲ್ಲಾ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ಎಲ್ಲಾ ಪ್ರಾದೇಶಿಕ ವಿಭಾಗಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ಕಛೇರಿ ಕಡತಕ್ಕೆ.

**ಕರ್ನಾಟಕ ಅರಣ್ಯ ಇಲಾಖೆ**
**ಅರ್ಜಿ ನಮೂನೆ**
**(ಸ್ವಂತ ವಸತಿ ಮನೆ ನಿರ್ಮಾಣ ಮಾಡಲು ಚಿಲ್ಲರೆ ಮಾರಾಟ ದರದಲ್ಲಿ ನಾಟ ಪಡೆಯುವ ಕುರಿತು ಅರ್ಜಿ.)**

ಇವರಿಗೆ,

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ/ ವಲಯ ಅರಣ್ಯ ಅಧಿಕಾರಿ

____________________ ಸರ್ಕಾರಿ ನಾಟಾ ಸಂಗ್ರಹಾಲಯ.

ಮಾನ್ಯರೆ,

ನಾನು ಸ್ವಂತ ವಸತಿ ಮನೆ ನಿರ್ಮಾಣ ಮಾಡಲು ಚಿಲ್ಲರೆ ಮಾರಾಟ ದರದಲ್ಲಿ ನಾಟ ಪಡೆಯುವ ಕುರಿತು ಅರ್ಜಿಯನ್ನು ಈ ಕೆಳಕಂಡ ಸ್ವಯಂ ದೃಢಿಕರಿಸಿದ ದಾಖಲೆಗಳನ್ನು ಅಡಕಗೊಳಿಸಿ ಸಲ್ಲಿಸುತ್ತಿದ್ದೇನೆ.

| **ಅ. ಸ್ವ ವಿವರಗಳ ಮಾಹಿತಿ** | | |
|---|---|---|
| 1 | ಅರ್ಜಿದಾರರ ಹೆಸರು | |
| 2 | ಅರ್ಜಿದಾರರ ತಂದೆ/ ಪತಿಯ ಹೆಸರು | |
| 3 | ಪೂರ್ಣ ವಿಳಾಸದ ಮಾಹಿತಿ ಪಿನ್ ಕೋಡ್ ಸಹಿತ | |
| 4 | ಅರ್ಜಿದಾರರ ಸಂಚಾರಿ ದೂರವಾಣಿ ಸಂಖ್ಯೆ | |
| 5 | ಅರ್ಜಿದಾರರ ವಾಸಸ್ಥಳದ ದೂರವಾಣಿ ಸಂಖ್ಯೆ ಎಸ್.ಟಿ.ಡಿ. ಕೋಡ್ ಸಹಿತ | |
| 6 | ಅರ್ಜಿದಾರರ ಕಛೇರಿ ದೂರವಾಣಿ ಸಂಖ್ಯೆ ಎಸ್.ಟಿ.ಡಿ. ಕೋಡ್ ಸಹಿತ | |
| 7 | ಅರ್ಜಿದಾರರ ಇ–ಮೇಲ್ ವಿವರ | |

| | | |
|---|---|---|
| **ಆ. ಬೇಕಾಗಿರುವ ನಾಟಗಳ ಮಾಹಿತಿ ಹಾಗೂ ಮನೆ ನಿರ್ಮಾಣ ಮಾಡುತ್ತಿರುವ ಸ್ಥಳದ ವಿವರ** | | |
| 8 | ಅರ್ಜಿದಾರರ ಕೋರಿರುವ ನಾಟಗಳ ವಿವರ | (A)............... Quantity = ..........cmtr/cft<br>(B) ............... Quantity = ..........cmtr/cft<br>(C) ............... Quantity = ..........cmtr/cft |
| | | **ಒಟ್ಟು:** |
| 9 | ಮನೆ ನಿರ್ಮಾಣ ಮಾಡುತ್ತಿರುವ ಸ್ಥಳದ ಪೂರ್ಣ ವಿಳಾಸ ಪಿನ್‌ಕೋಡ್ ಸಹಿತ | |
| 10 | ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ನಕ್ಷೆಯಂತೆ ನಿರ್ಮಿಸುತ್ತಿರುವ ಮನೆಯ builtup area ವಿವರಗಳು ಚದರ ಮೀಟರ್‌ನಲ್ಲಿ | |
| **ಇ. ಸ್ವಯಂ ದೃಢಿಕೃತ ದಾಖಲೆಗಳು** | | |
| 11 | ಆದಾರ್ ಚೀಟಿ (Aadhar Card) | |
| 12 | ಪಾನ್ ಚೀಟಿ (PAN Card) | |
| 13 | ನಿರ್ಮಾಣ ಮಾಡುತ್ತಿರುವ ಮನೆಯ ನೀಲಿನಕ್ಷೆ | |
| 14 | ಮನೆ ನಿರ್ಮಿಸಲು ಸಕ್ಷಮ ಪ್ರಾಧಿಕಾರ ನೀಡಿರುವ ಅನುಮತಿ ಪತ್ರ | |
| 12 | ನಿರ್ಮಾಣ ಮಾಡುತ್ತಿರುವ ಮನೆಯ ನಾಟಗಳ ಬೇಡಿಕೆಯ ಅಂದಾಜು ಪಟ್ಟಿ | |
| 13 | ಅವಶ್ಯವಿದ್ದಲ್ಲಿ ಇತರೆ ದಾಖಲಾತಿಗಳು (ಮಾಹಿತಿ ಒದಗಿಸುವುದು) | |

ಈ ಕೆಳಗೆ ಸಹಿ ಮಾಡಿರುವ ನಾನು ಚಿಲ್ಲರೆ ಮಾರಾಟ ದರದಲ್ಲಿ ನಾಟ ಖರೀದಿ, ಸಾಗಾಣಿಕೆ ಹಾಗೂ ದಾಸ್ತಾನಿಗೆ ಸಂಬಂಧಿಸಿದ ಎಲ್ಲಾ ಕಾಯಿದೆ ಹಾಗೂ ಕಾನೂನುಗಳಿಗೆ ಬದ್ದನಾಗಿರಲು ಹಾಗೂ ಆಯ್ಕೆ ಮಾಡಿಕೊಳ್ಳ ಬಯಸಿದಲ್ಲಿ ಚಿಲ್ಲರೆ ಮಾರಾಟ ದರದ ಶೇಕಡಾ 10 ರ ಹೆಚ್ಚುವರಿ ಮೊತ್ತವನ್ನು ಪಾವತಿಸುವ ಕುರಿತು ಇಲಾಖೆ ವಿಧಿಸುವ ಎಲ್ಲಾ ಷರತ್ತುಗಳಿಗೆ ಒಪ್ಪುತ್ತೇನೆ.

ಒಂದು ವೇಳೆ ನಾನು ನೀಡಿರುವ ಯಾವುದೇ ಮಾಹಿತಿಗಳು ಕಾನೂನು ರೀತಿಯಲ್ಲಿ ಸುಳ್ಳಾಗಿದ್ದಲ್ಲಿ ಅಥವಾ ನಕಲಿ/ಖೊಟಾ ದಾಖಲೆಗಳಾಗಿದ್ದಲ್ಲಿ ಈ ಕೆಳಗೆ ಸಹಿ ಮಾಡಿರುವ ನಾನು ಚಿಲ್ಲರೆ ಮಾರಾಟ ದರದಲ್ಲಿ ನಾಟ ಖರೀದಿಗಾಗಿ ಪಾವತಿಸಿರುವ ಮೊತ್ತವನ್ನು ಹಾಗೂ ನಾಟವನ್ನು ಇಲಾಖೆ ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಇಲಾಖೆ ಮುಂದೆ ಕೈಗೊಳ್ಳುವ ಯಾವುದೇ ಕಾನೂನು ಕ್ರಮಗಳಿಗೆ ಸಹಾ ಒಪ್ಪುತ್ತೇನೆ.

ತಮ್ಮ ವಿಶ್ವಾಸಿ.

## ಸ್ವಂತ ಮನೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯಿಂದ ನಾಟಾ ಪಡೆಯಲು ಸುವರ್ಣಾವಕಾಶ

ಸಾರ್ವಜನಿಕರಿಗೆ ಸ್ವಂತ ಮನೆ ನಿರ್ಮಾಣ ಮಾಡಿಕೊಳ್ಳಲು ರಾಜ್ಯದಲ್ಲಿರುವ ಅರಣ್ಯ ಇಲಾಖೆಯ ನಲವತ್ತು ನಾಟ ಸಂಗ್ರಹಾಲಯಗಳಿಂದ ನಾಟಗಳನ್ನು ಚಿಲ್ಲರೆ ಮಾರಾಟ ದರದಲ್ಲಿ ಒದಗಿಸಲಾಗುತ್ತಿದೆ, ಅದರಂತೆ ಸಾಗುವಾನಿ ಮತ್ತು ಬೀಟೆ ಜಾತಿಯ ನಾಟಗಳನ್ನು ಹೊರತುಪಡಿಸಿ ಉಳಿದ ಇಪ್ಪತ್ತು ಜಾತಿ ನಾಟಗಳಾದ ಉದಾ: ಅಕೇಶಿಯಾ ಅರಿಕ್ಯೂಲಿಫಾರ್‌ಮಿಸ್ (Acacia auriculiformis), ಹೊನ್ನೆ (Pterocarpus marsupium), ಯತ್ತೇಗ (Adina cordifolia), ಕಿರಾಲ್‌ಬೋಗಿ (Hopea parviflora), ನಂದಿ (Lagerstroemia lanceolata) ಇತ್ಯಾದಿ ನಾಟಗಳನ್ನು ಸಾರ್ವಜನಿಕರಿಗೆ ಅವರ ಸ್ವಂತ ಉಪಯೋಗಕ್ಕೆ ಚಿಲ್ಲರೆ ಮಾರಾಟ ದರದಲ್ಲಿ ನೀಡಲು ದಿನಾಂಕ 19.06.2017ರಂದು ಸುತ್ತೋಲೆಯನ್ನು ಹೊರಡಿಸಲಾಗಿದ್ದು ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಡಿಸಿಕೊಳ್ಳಲು ಕೋರಿದೆ.

ರಾಜ್ಯದಲ್ಲಿರುವ ಅರಣ್ಯ ಇಲಾಖೆಯ ನಲವತ್ತು ನಾಟ ಸಂಗ್ರಹಾಲಯಗಳಲ್ಲಿ ದೊರೆಯುವ ನಾಟ ಲಭ್ಯತೆ ಹಾಗೂ ನಾಟಗಳನ್ನು ಪಡೆಯಲು ಸಂಬಂದಿಸದ ಅರ್ಜಿ ನಮೂನೆ ಇತ್ಯಾದಿ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್ http//aranya.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/-
**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಸಂಪನ್ಮೂಲ ನಿರ್ವಹಣೆ)